ಇ) ಈ ಯೋಜನೆಗಳಿಂದ ಕೆ.ಪಿ.ಟಿ.ಸಿ.ಎಲ್.ಗೆ ರೂ: 1, 12, 225.00ಗಳು ಎರಡು ವರ್ಷಗಳಿಂದ ಬಾಕಿ ಇರುತ್ತದೆ.

ಈ) ಮುಂದಿನ ತಿಂಗಳುಗಳಲ್ಲಿ ಬಾಕಿ ಇರುವ ಹಣವನ್ನು ಸಂದಾಯ ಮಾಡಿ ಆದಷ್ಟು ಬೇಗನೆ ಈ ಯೋಜನೆಯಿಂದ ರೈತರಿಗೆ ನೀರು ಒದಗಿಸಲು ಕ್ರಮ ಕೈ ಗೊಳ್ಳಲಾಗುವುದು.

ಚಳ್ಳಕೆರೆ ತಾಲ್ಲೂಕಿನ ಕೆರೆಗಳ ಹೂಳು ಎತ್ತುವ ಬಗ್ಗೆ

2674 (3262) ಶ್ರೀ ಬಸವರಾಜ್ ಮಂಡಿಮಲ್ ಬಿ. (ಚಳ್ಳಕೆರೆ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಚಳ್ಳಕೆರೆ ತಾಲ್ಲೂಕಿನ ಯಾವ ಕೆರೆಗಳ ಹೂಳು ಎತ್ತಲಾಗಿದೆ; (ವಿವರ ನೀಡುವುದು)

ಆ) ಪ್ರತಿ ಕೆರೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ; (ವರ್ಷವಾರು ವಿವರ)

ಇ) ಖರ್ಚಾದ ಹಣಕ್ಕೆ ಅನುಗುಣವಾಗಿ ಸದರಿ ಹೂಳೆತ್ತುವ ಕಾರ್ಯಕ್ರಮ ನಡೆದಿದೆಯೇ;

ಈ) ಇಲ್ಲದಿದ್ದಲ್ಲಿ ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ವಿವರಗಳು ಈ ರೀತಿ ಇವೆ : 1997-98 - ಯಾವುದೂ ಇಲ್ಲ
1988-99 - ಸಾಣೆಕೆರೆ
99-2000 - ಸಾಣೆಕೆರೆ

ಆ) <u>ಸಾಣೆಕೆರೆ</u>
1998-99 - 8,96,766 ಲಕ್ಷ ರೂಗಳು
99-2000- 53,234 - ''-

ಇ) ಹೌದು.

ಈ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಚಳ್ಳಕೆರೆ ತಾಲ್ಲೂಕಿನ ರಾಣೇಕೆರೆ ಫೀಡರ್ ಚಾನಲ್ ದುರಸ್ತಿ

2676 (3264) ಶ್ರೀ ಬಸವರಾಜ್ ಮಂಡಿಮತ್.ಜಿ.(ಚಳ್ಳಕೆರೆ): ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ತಾಲ್ಲೂಕಿನ ರಾಣೇಕೆರೆ ಫೀಡರ್ ಚಾನಲ್ ದುರಸ್ತಿಗೆ ಕಳೆದ 3 ವರ್ಷಗಳಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ; (ಪ್ರತಿ ವರ್ಷದ ಖರ್ಚನ್ನು ಪ್ರತ್ಯೇಕ ನೀಡುವುದು)

ಆ) ಈಗಲೂ ಸಹ ಸದರಿ ಚಾನಲ್ ಮುಖಾಂತರ ನೀರು ರಾಣೇಕೆರೆಗೆ ಹರಿಯುತ್ತಿಲ್ಲವೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ರಾಣೇಕೆರೆಗೆ ಸದರಿ ಚಾನಲ್ ಮೂಲಕ ನೀರು ಬರುವಂತೆ ಮಾಡಲು ಸರ್ಕಾರ ತೆಗೆದುಕೊಂಡ ಕ್ರಮಗಳುಯಾವುವು?

ಶ್ರೀ ಎಚ್.ಕೆ ಪಾಟೀಲ್(ಬೃಹತ್ ಮತ್ತು ಮಧ್ಯಮ ನೀರಾವರಿ ಮಂತ್ರಿಗಳು)

ಅ) ಕಳೆದ ಮೂರು ವರ್ಷಗಳ ದುರಸ್ಥಿಯ ವೆಚ್ಚ ಈ ಕೆಳಕಂಡಂತಿದೆ (ಲೆಕ್ಕ ಶೀರ್ಷಿಕೆ 2701-F.C.R.T)

1. 1997-98	ರೂ. 0.64 ಲಕ್ಷಗಳು
2. 1998-99	ರೂ. 1.07 ಲಕ್ಷಗಳು
3. 1999-2000	ರೂ. 0.75 ಲಕ್ಷಗಳು
ಒಟ್ಟು	**ರೂ.2.46 ಲಕ್ಷಗಳು**

ಆ) ರಾಣೇಕೆರೆಗೆ ಅತಿ ಹೆಚ್ಚಿನ ಮಳೆಯು ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳುಗಳಲ್ಲಿ ಆದಾಗ ಮತ್ತು ನಾರಾಯಣಪುರ ಅಣೆಕಟ್ಟಿಯ ತುಂಬಿದಾಗ ಚಾನಲ್‌ನಲ್ಲಿ ನೀರು ಯಾವ ತೊಂದರೆ ಇಲ್ಲದೇ ಹರಿಯುತ್ತದೆ. 1996ನೇ ಆಗಸ್ಟ್ 24 ರಿಂದ ಕಾಲುವೆಯಲ್ಲಿ ನೀರನ್ನು ಹರಿಬಿಡಲಾಗಿದೆ.

ಇ) ಉದ್ಭವಿಸುವುದಿಲ್ಲ.

ಚಳ್ಳಕೆರೆ ತಾಲ್ಲೂಕಿನ ನಾರಾಯಣಪುರ ನಾಲಾ ದುರಸ್ತಿ

2677 (3265) ಶ್ರೀ ಬಸವರಾಜ ಮಂಡಿಮಠ್ ಜಿ. (ಚಳ್ಳಕೆರೆ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಳ್ಳಕೆರೆ ತಾಲ್ಲೂಕಿನ ನಾರಾಯಣಪುರ ನಾಲಾ ದುರಸ್ತಿಗಾಗಿ ಕಳೆದ 3 ವರ್ಷಗಳಲ್ಲಿ ಎಷ್ಟು ಹಣ ಖರ್ಚು ಮಾಡಲಾಗಿದೆ; (ಪ್ರತಿ ವರ್ಷದ ಖರ್ಚನ್ನು ಪ್ರತ್ಯೇಕ ವಿವರದೊಂದಿಗೆ ನೀಡುವುದು)

ಆ) ಇಷ್ಟು ಮೊತ್ತ ಖರ್ಚಾದರೂ ಸಹ ಸದ್ರಿನಾಲಾ ದುರಸ್ತಿಯ ಬಗ್ಗೆ ಸರ್ಕಾರ ತೃಪ್ತಿಗೊಂಡಿದೆಯೇ;

ಇ) ಹಾಗಿಲ್ಲದಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈ ಗೊಂಡ ಕ್ರಮಗಳು ಯಾವುವು?

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಕಳೆದ 3 ವರ್ಷಗಳಲ್ಲಿ ಮಾಡಿರುವು ಖರ್ಚಿನ ವಿವರ :-

1997-98	ರೂ.9.88 ಲಕ್ಷಗಳು
1998-99	ರೂ.6.04 ಲಕ್ಷಗಳು
99-2000	ರೂ.0.54 ಲಕ್ಷಗಳು

ಹಾಗೂ ಈ ಕಾಲುವೆಯ ಆಧುನೀಕರಣಕ್ಕಾಗಿ 99-2000ರಲ್ಲಿ ರೂ.60.00 ಲಕ್ಷಗಳಿಗೆ ಅನುಮೋದನೆ ನೀಡಿದೆ.